# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 595 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.02.2023 |
| ಉತ್ತರಿಸುವವರು | : | ಮಾನ್ಯಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ವಿಶೇಷ ಚೇತನ ಮಕ್ಕಳ ಸಂಖ್ಯೆ ಎಷ್ಟು; ಇವುಗಳಲ್ಲಿ ವಿಶೇಷ ಶಿಕ್ಷಣ ವ್ಯಾಪ್ತಿಗೆ ಒಳಪಟ್ಟ ಮಕ್ಕಳ ಸಂಖ್ಯೆ ಎಷ್ಟು; (ವರ್ಗೀಕರಣವಾರು ಮಾಹಿತಿ ನೀಡುವುದು) | 1. ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ ಒಟ್ಟು ವಿಕಲಚೇತನರ ಸಂಖ್ಯೆ:13,24,205<br>2. 2011ರ ಜನಗಣತಿಯ ಅನುಸಾರ 0-19 ವಯಸ್ಸಿನ ವಿಶೇಷ ಚೇತನ ಮಕ್ಕಳ ಸಂಖ್ಯೆ:3,85,615 ಇದ್ದು, ವರ್ಗೀಕರಣ ಮಾಹಿತಿಯನ್ನು ಅನುಬಂಧ-01ರಲ್ಲಿ ಒದಗಿಸಲಾಗಿದೆ.<br>3. ಅದರಲ್ಲಿ ಈ ಇಲಾಖೆಯಿಂದ ವಿಶೇಷ ಶಿಕ್ಷಣ ವ್ಯಾಪ್ತಿಗೆ ಒಳಪಟ್ಟ ಮಕ್ಕಳ ಸಂಖ್ಯೆ:12,581 |
| 2 | ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಸರ್ಕಾರೇತರ ವಿಶೇಷ ಶಾಲೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಶಿಶುಕೇಂದ್ರಿತ ಯೋಜನೆಯಲ್ಲಿ ಶಿಕ್ಷಣ ನೀಡುತ್ತಿರುವ ಶಾಲೆಗಳು ಹಾಗೂ ಶಿಕ್ಷಕ ಕೇಂದ್ರಿತ ವಿಶೇಷ ಶಾಲೆಗಳೆಷ್ಟು; ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಸರ್ಕಾರೇತರ ವಿಶೇಷ ಶಾಲೆಗಳ ಸಂಖ್ಯೆ ಈ ಕೆಳಕಂಡಂತಿದೆ.<br>ಶಾಲೆಯ ವಿವರ \| ಶಾಲೆಗಳ ಸಂಖ್ಯೆ \| ಮಕ್ಕಳ ಸಂಖ್ಯೆ<br>ಸರ್ಕಾರಿ ಶಾಲೆಗಳ ಸಂಖ್ಯೆ \| 09 \| 470<br>1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ \| 34 \| 1919<br>ಶಿಶುಕೇಂದ್ರೀಕೃತ ಯೋಜನೆಯಡಿ ನಡೆಯುತ್ತಿರುವ ಶಾಲೆಗಳ ಸಂಖ್ಯೆ \| 141 \| 10192 |
| 3 | 2011ರ ಜನಗಣತಿ ಪ್ರಕಾರ ಗುರುತಿಸಲಾದ ಎಲ್ಲಾ ವಿಶೇಷ ಚೇತನ ಮಕ್ಕಳನ್ನು ವಿಶೇಷ ಶಿಕ್ಷಣದ ವ್ಯಾಪ್ತಿಗೆತರಲಾಗಿದೆಯೇ; ಎಲ್ಲಾ ಮಕ್ಕಳನ್ನು ಶಿಕ್ಷಣದ ವ್ಯಾಪ್ತಿಗೆ ತರಲು ಸರ್ಕಾರ ಕೈಗೊಂಡ ಕ್ರಮವೇನು: | ವಿಶೇಷ ಚೇತನ ಮಕ್ಕಳನ್ನು ಶಿಕ್ಷಣದ ವ್ಯಾಪ್ತಿಗೆ ತರುವ ಸಂಬಂಧ ವಿಶೇಷ ಶಾಲೆಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದಲ್ಲಿ ಆ ಶಾಲೆಗಳನ್ನು ನಡೆಸಲು ಇಲಾಖೆಯಿಂದ ಅನುಮತಿ ನೀಡಲಾಗುವುದು. ಸಂಸ್ಥೆಯು ಶಾಲೆ ನಡೆಸಲು ಅನುಮತಿ ಪಡೆದು 3 ವರ್ಷಗಳ ನಂತರ 4ನೇ ವರ್ಷದಲ್ಲಿ ವಿಶೇಷ ಶಾಲೆಯ ನಿರ್ವಹಣೆಗಾಗಿ ಅಂಗವಿಕಲ ಮಕ್ಕಳ ಶಿಶು ಕೇಂದ್ರೀಕೃತ ಯೋಜನೆಯಡಿ ನಿಯಮಾನುಸಾರ ಅನುದಾನ ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುವುದು. |

| | | |
|---|---|---|
| 4 | ಆದೇಶ ಸಂಖ್ಯೆ:2710/2021-22 ದಿನಾಂಕ:22.03.2022ರಂತೆ ಅನುದಾನದ ವ್ಯಾಪ್ತಿಗೆ ತರುವಂತೆ ಸ್ವೀಕರಿಸಿರುವ ಪ್ರಸ್ತಾವನೆಗಳು ಎಷ್ಟು; ಈ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದೆಯೇ; ನೀಡದಿದ್ದಲ್ಲಿ, ಕಾರಣವೇನು; | 2022-23ನೇ ಸಾಲಿನಲ್ಲಿ 08 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಸದರಿ ಪ್ರಸ್ತಾವನೆಗಳು ಆರ್ಥಿಕ ಇಲಾಖೆಯ ಸಹಮತಿ ಪಡೆದು ಆಡಾಳಿತಾತ್ಮಕ ಅನುಮೋದನೆ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ. |
| 5 | ರಾಜ್ಯದಲ್ಲಿ ವಿಶೇಷ ಶಾಲೆಗಳನ್ನು ಮುನ್ನಡೆಸುವುದು ತುಂಬಾ ದುಬಾರಿಯಾಗಿದ್ದು, ವಿಶೇಷ ಚೇತನ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಸಂಸ್ಥೆಗಳನ್ನು ಯಾವಾಗ ಅನುದಾನದ ವ್ಯಾಪ್ತಿಗೆ ತರಲಾಗುವುದು: ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ವಿಶೇಷ ಚೇತನ ಮಕ್ಕಳನ್ನು ಶಿಕ್ಷಣದ ವ್ಯಾಪ್ತಿಗೆ ತರುವ ಸಂಬಂಧ ವಿಶೇಷ ಶಾಲೆಗಳನ್ನು ನಡೆಸಲು ಸ್ವಯಂ ಸೇವಾ ಸಂಸ್ಥೆಗಳು ಮುಂದೆ ಬಂದಲ್ಲಿ ಆ ಶಾಲೆಗಳನ್ನು ನಡೆಸಲು ಇಲಾಖೆಯಿಂದ ಅನುಮತಿ ನೀಡಲಾಗುವುದು. ಸಂಸ್ಥೆಯು ಶಾಲೆ ನಡೆಸಲು ಅನುಮತಿ ಪಡೆದು 3 ವರ್ಷಗಳ ನಂತರ 4ನೇ ವರ್ಷದಲ್ಲಿ ವಿಶೇಷ ಶಾಲೆಯ ನಿರ್ವಹಣೆಗಾಗಿ ಅಂಗವಿಕಲ ಮಕ್ಕಳ ಶಿಶು ಕೇಂದ್ರೀಕೃತ ಯೋಜನೆಯಡಿ ನಿಯಮಾನುಸಾರ ಅನುದಾನ ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುವುದು. |

ಸಂಖ್ಯೆ:ಮಮಇ 40 ಪಿಹೆಚ್‌ಪಿ 2023

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖಾ
ಸಚಿವರು

ಅನುಬಂಧ-1

2011ರ ಜನಗಣತಿಯ ಪ್ರಕಾರ 0 ರಿಂದ 19 ವಯಸ್ಸಿನ ಮಕ್ಕಳ ಜಿಲ್ಲಾವಾರು ವಿಕಲಚೇತನರ ಮಾಹಿತಿ

| ಕ್ರ. ಸಂ. | ಜಿಲ್ಲೆಗಳ ಹೆಸರು | ದೃಷ್ಟಿದೋಷ | ಕಿವುಡುತನ | ಮಾತಿನ ತೊಂದರೆ | ಚಲನವಲನ | ಬುದ್ಧಿ ಮಾಂದ್ಯ | ಮಾನಸಿಕ ಅಸ್ವಸ್ಥರು | ಇತರೆ | ಬಹುವಿಧ | ಒಟ್ಟು |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಬೆಂಗಳೂರು ನಗರ | 24614 | 18563 | 3414 | 3122 | 5070 | 706 | 18344 | 3791 | 77624 |
| 2 | ಬೆಂಗಳೂರು (ಗ್ರಾ) | 797 | 670 | 566 | 708 | 531 | 54 | 1240 | 713 | 5279 |
| 3 | ಬೆಳಗಾಂ | 3690 | 3442 | 3008 | 5793 | 3384 | 258 | 5007 | 3335 | 27917 |
| 4 | ಬಳ್ಳಾರಿ | 2660 | 3197 | 1564 | 3353 | 1790 | 153 | 3506 | 1562 | 17785 |
| 5 | ಬೀದರ್ | 1938 | 2584 | 1352 | 2393 | 1108 | 116 | 2729 | 1248 | 13468 |
| 6 | ಬಿಜಾಪುರ | 2120 | 2382 | 1739 | 2787 | 1500 | 102 | 2896 | 1693 | 15219 |
| 7 | ಬಾಗಲಕೋಟೆ | 1531 | 1919 | 1591 | 2974 | 1543 | 93 | 2430 | 1628 | 13709 |
| 8 | ಚಿತ್ರದುರ್ಗ | 1717 | 1755 | 1240 | 1741 | 1012 | 86 | 1976 | 1210 | 10737 |
| 9 | ಚಿಕ್ಕಮಗಳೂರು | 804 | 610 | 507 | 765 | 570 | 32 | 974 | 670 | 4932 |
| 10 | ಚಾಮರಾಜನಗರ | 695 | 948 | 682 | 781 | 528 | 45 | 970 | 777 | 5426 |
| 11 | ಧಾರವಾಡ | 1598 | 1473 | 1124 | 1956 | 1192 | 120 | 1983 | 1476 | 10922 |
| 12 | ದಕ್ಷಿಣಕನ್ನಡ | 557 | 706 | 641 | 823 | 1029 | 105 | 935 | 1218 | 6014 |
| 13 | ದಾವಣಗೆರೆ | 2022 | 1971 | 1558 | 2094 | 1314 | 80 | 2766 | 1275 | 13080 |
| 14 | ಗುಲ್ಬರ್ಗಾ | 4199 | 6343 | 1799 | 3149 | 1952 | 128 | 4722 | 1617 | 23909 |
| 15 | ಗದಗ | 1032 | 990 | 808 | 1570 | 955 | 65 | 1496 | 1069 | 7985 |
| 16 | ಹಾಸನ | 1072 | 1180 | 836 | 1052 | 821 | 46 | 1920 | 1042 | 7969 |
| 17 | ಹಾವೇರಿ | 1298 | 1244 | 1105 | 2427 | 1515 | 101 | 2028 | 1562 | 11280 |
| 18 | ಕೊಡಗು | 139 | 298 | 163 | 267 | 309 | 16 | 481 | 298 | 1971 |
| 19 | ಕೋಲಾರ | 1308 | 1705 | 871 | 1237 | 913 | 129 | 1671 | 1139 | 8973 |
| 20 | ಕೊಪ್ಪಳ | 1593 | 1851 | 1192 | 2723 | 1205 | 108 | 2440 | 1156 | 12268 |
| 21 | ಮೈಸೂರು | 2623 | 3357 | 1539 | 1752 | 1414 | 153 | 3293 | 1891 | 16022 |
| 22 | ಮಂಡ್ಯ | 1423 | 1129 | 1033 | 1343 | 1009 | 96 | 1458 | 1191 | 8682 |
| 23 | ರಾಯಚೂರು | 2280 | 2536 | 1386 | 2669 | 1325 | 120 | 2656 | 1392 | 14364 |
| 24 | ಶಿವಮೊಗ್ಗ | 1151 | 987 | 848 | 1280 | 1086 | 94 | 1449 | 1190 | 8085 |
| 25 | ತುಮಕೂರು | 1929 | 2162 | 1707 | 2616 | 1365 | 137 | 2559 | 1944 | 14419 |
| 26 | ಉತ್ತರಕನ್ನಡ | 610 | 604 | 574 | 976 | 826 | 60 | 887 | 1067 | 5604 |
| 27 | ಉಡುಪಿ | 308 | 356 | 355 | 407 | 657 | 70 | 656 | 626 | 3435 |
| 28 | ರಾಮನಗರ | 165 | 191 | 131 | 204 | 115 | 13 | 232 | 145 | 1196 |
| 29 | ಚಿಕ್ಕಬಳ್ಳಾಪುರ | 1372 | 1176 | 792 | 1142 | 916 | 119 | 1649 | 976 | 8142 |
| 30 | ಯಾದಗಿರಿ | 1265 | 1888 | 896 | 1768 | 856 | 56 | 1761 | 709 | 9199 |
| | ಒಟ್ಟು | 68,510 | 68,217 | 35,021 | 55,872 | 37,810 | 3,461 | 77,114 | 39,610 | 3,85,615 |